ಅಧ್ಯಕ್ಷರು.—ಉಪಪ್ರಶ್ನೆ ಕೇಳಿ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಕುಂದಾಪುರದವರೆಗೆ 4.6 ಕಿಲೋಮೀಟರ್ ಒಂದು ರಸ್ತೆಯನ್ನು ಮಾಡಿದ್ದೀರಿ. ಇದು ತುಂಬಾ ಕಡಿಮೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ರೀತಿಯಾಗಿ ಪ್ರದೇಶ ಪ್ರದೇಶದಲ್ಲೂ ಇದ್ದರೆ ಇನ್ನು, ಜಿಲ್ಲೆ ಜಿಲ್ಲೆಯಲ್ಲಿ ಎಷ್ಟು ವ್ಯತ್ಯಾಸ ಇರಬಹುದು ? ದಕ್ಷಿಣ ಕನ್ನಡ ಜಿಲ್ಲೆಗೂ ಮತ್ತು ಹಾಸನ ಜಿಲ್ಲೆಗೂ ಎಷ್ಟು ವ್ಯತ್ಯಾಸ ಇರಬಹುದು ಎಂಬ ಸಂಶಯ, ಪ್ರಶ್ನೆ ನನ್ನಲ್ಲಿ ಉದ್ಭವವಾಗುತ್ತಿದೆ.

ಅಧ್ಯಕ್ಷರು.—ಅವರಿಗೆ ಸಂಶಯ ಉದ್ಭವ ಆಗುತ್ತಿದೆಯಂತೆ ; ಉತ್ತರ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಬೈಂದೂರು ಜನತಾ ಪಕ್ಷದ ಮತಕ್ಷೇತ್ರ. ಅಲ್ಲೂ 5 ಕಿಲೋಮೀಟರ್ ರಸ್ತೆಯನ್ನು ಮಾಡಿದ್ದೇವೆ. ಕುಂದಾಪುರದಲ್ಲೂ 5 ಕಿಲೋಮೀಟರ್ ರಸ್ತೆ ಮಾಡಿದ್ದೇವೆ, ಇದರಲ್ಲಿ ಪಾರ್ಟಿ ಪ್ರಶ್ನೆ ಉದ್ಭವವಾಗುವುದಿಲ್ಲ. ಏತಕ್ಕೆಂದರೆ ಎಲ್ಲೆಲ್ಲಿ ಡಾಮರು ರಸ್ತೆ ಮಾಡಬೇಕಾಗುತ್ತದೋ, ಅಲ್ಲಿ ಟ್ರಾಫಿಕ್ ಲೆಕ್ಕಾಚಾರ ನೋಡಿ ಮಾಡಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರು ಏನ್ನುವ ಕಾರಣ ಅಲ್ಲ. ಅವಶ್ಯಕತೆಗೆ ಅನುಗುಣವಾಗಿ ಮಾಡಬೇಕಾಗುತ್ತದೆ. 1982-83ರಲ್ಲಿ ಒಂದು ಕಿಲೋಮೀಟರ್ ರಸ್ತೆ ಕೂಡ ಮಾಡಿರಲಿಲ್ಲ. ಈ ವರ್ಷ 5 ಕಿಲೋಮೀಟರ್ ರಸ್ತೆಯನ್ನಾದರೂ ಮಾಡಿದ್ದೇವೆ, ಬೇಕಾದರೆ ಇನ್ನೂ ಸ್ವಲ್ಪ ಹೆಚ್ಚು ಮಾಡೋಣ. ಆದರೆ ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ.

ಶ್ರೀ ಕೆ. ರಾಮಭಟ್.—ಈ ಹೊಸ ಡಾಮರು ಹಾಕುವ ಕೆಲಸ ಸ್ಪಿಲ್‌ಓವರ್ ಕೆಲಸವೋ ಅಥವಾ ಹೊಸ ಕೆಲಸವೋ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರೊಳಗೆ 1983-84ರಲ್ಲಿ ಒಂದು ರೋಡ್‌ನಲ್ಲಿ ಹತ್ತು ಕಿಲೋಮೀಟರ್ ಇದ್ದರೆ, 1982-83ರಲ್ಲಿ 2 ಕಿಲೋಮೀಟರ್ ಇರುತ್ತದೆ. ಒಟ್ಟು ಎಷ್ಟು ಮೈಲೇಜ್ ಕವರ್ ಮಾಡಿದ್ದೇವೆ ಎಂದರೆ 177 ಕಿಲೋಮೀಟರ್. ಇಲ್ಲಿ ಕ್ಯಾರಿಡ್‌ಓವರ್ ಪ್ರಶ್ನೆಗಿಂತ ಹೆಚ್ಚಾಗಿ ಎಷ್ಟು ಅಸ್ಫಾಲ್ಟ್ ಮಾಡಿದ್ದೇವೆ ಏಂದು ಹೇಳಿದ್ದೇನೆ. ಸ್ಟೇಟ್ ಆವರೇಜ್ 46 ಕಿಲೋಮೀಟರ್ ಇದ್ದರೆ ಮಂಗಳೂರಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ 70 ಪರ್ಸೆಂಟ್ ಇದೆ. ಬಂದರೆಡು ತಾಲ್ಲೂಕಿನಲ್ಲಿ ಮಾತ್ರ 50 ಪರ್ಸೆಂಟ್ ಇದೆ. ಆದರೂ ಕೂಡ ಸ್ಟೇಟ್ ಎವರೇಜ್‌ಗೆ ಹೋಲಿಸಿದರೆ ಬಹಳ ಹೆಚ್ಚಿನ ಪ್ರಗತಿ ಇಲ್ಲಿ ಆಗಿದೆ.

ವಿಷಯ ; ಕರ್ನಾಟಕ ಶ್ರೇಷ್ಠ ನ್ಯಾಯಾಲಯ ಡ.ಸಿ.ನಂ. 14326-1978ರಲ್ಲಿ ಪಾಟಕಾರಿ ಕೆಲಸಗಾರರ ಬಗ್ಗೆ ಕೊಟ್ಟಿರುವ ತೀರ್ಪನ್ನು ಜಾರಿಗೆ ತರುವುದು.

ಪ್ರ. ಸಂಖ್ಯೆ : 684 (1654) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಘಟಪ್ರಭಾ ಮತ್ತು ಮಲಪ್ರಭಾ ನೀರಾವರಿ ಕ್ಷೇತ್ರದ ಪಾಟಕಾರಿ ಕೆಲಸಗಾರರ ವೇತನ ಪುನರ್‌ವಿಮರ್ಶೆ ಬಗ್ಗೆ ಶ್ರೇಷ್ಠ ನ್ಯಾಯಾಲಯ ಡ.ವಿ. ನಂ. 14326-79/ ಖಟ್ಟಲೆಯಲ್ಲಿ 16-3-1983ರಂದು ಕೊಟ್ಟ ತೀರ್ಪು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆದರ ತೀರ್ಪು ಏನು ;

ಆ) ಸದರಿ ತೀರ್ಪಿನ ಬಗ್ಗೆ ಸರ್ಕಾರದವರು ಮೇಲ್ಮನವಿ ಮಾಡಿದ್ದರೆ ಹಾಗಿದ್ದಲ್ಲಿ ಮೇಲ್ಮನವಿಯ ಬಗ್ಗೆ ಆದ ತೀರ್ಪನ್ನು ಸರ್ಕಾರದ ಮೇಲ್ಮನವಿ ತಿರಸ್ಕೃತವಾಗಿದ್ದರೆ ಕೆಳ ನ್ಯಾಯಾಲಯದ ತೀರ್ಪನ್ನು ಜಾರಿಗೆ ಕೊಡಲಾಗುವುದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು. ದಿನಾಂಕ 1-1-70ರ ಮೊದಲು ಇದ್ದ ವೇತನ ಶ್ರೇಣಿಯನ್ನು ಸರಿಪಡಿಸಿ ವರ್ಕ್ ಚಾರ್ಜ್ ಸಿಬ್ಬಂದಿಯಲ್ಲಿ ಕೆಲಸ ಮಾಡುವ ಪಾಟಕಾರಿ ನೌಕರರಿಗೆ ತಕ್ಕುದಾದ ವೇತನ ಶ್ರೇಣಿಯನ್ನು ಕೊಡಲು ಉಚ್ಚ ನ್ಯಾಯಾಲಯವು ತನ್ನ ದಿನಾಂಕ 10-3-1983ರ ಆಜ್ಞೆಯಲ್ಲಿ ಸರ್ಕಾರಕ್ಕೆ ಆದೇಶವನ್ನು ನೀಡಿದೆ. ಈ ಆಧಾರದ ಮೇಲೆ ಉಚ್ಚ ನ್ಯಾಯಾಲಯವು ವರ್ಕ್‌ಚಾರ್ಜ್ ಸಿಬ್ಬಂದಿಯಲ್ಲಿ ಕೆಲಸ ಮಾಡುವ ನೌಕರರು ಪುನರ್‌ವಿಮರ್ಶೆಯ ಪ್ರಕಾರ ಹೊಸ ವೇತನಾ ಶ್ರೇಣಿಗೆ ಅರ್ಹರೆಂದು ಪುನಃ ಆಜ್ಞೆಯನ್ನು ಹೊರಡಿಸಿದೆ.

ಆ) ಹೌದು. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ರೀತಿಯ ಆಧಾರದ ಮೇಲೆ ಸರ್ಕಾರವು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದು.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಉಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯವು ತೀರ್ಪು ಕೊಟ್ಟಿದೆ. ಆದರೂ ಕೂಡ ಇದನ್ನು ಜಾರಿಗೆ ತರುವುದಕ್ಕೆ ತೊಂದರೆ ಏನಿದೆ?

ಇದಲ್ಲದೆ ಪಿ.ಡ್ಲ್ಯೂ.ಡಿ. ಇಲಾಖೆಯಲ್ಲಿ ವರ್ಕ್‌ಚಾರ್ಜ್ ಕೆಲಸಗಾರರಿಗೆ ಇದ್ದಂತಹ ಕನಿಷ್ಟ ವೇತನ ಮುನ್ನೂರು ರೂಪಾಯಿ ಇರಬೇಕೆಂದು ಆರ್ಜಿಯನ್ನು ಹೊರಡಿಸಿದ್ದಾರೆ. ಮತ್ತು ಈ ಆಜ್ಞೆಗೆ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದನ್ನು ಇನ್ನೆಷ್ಟು ದಿವಸಗಳಲ್ಲಿ ಜಾರಿಗೆ ತರುತ್ತೀರಿ ? ಎಲ್ಲರಿಗೂ ಕನಿಷ್ಟ ಮುನ್ನೂರು ರೂಪಾಯಿಗಿಂತಲೂ ಹೆಚ್ಚು ಕೂಲಿ ಕೊಡುತ್ತೀರಾ ಎಂದು ನಾನು ತಮ್ಮ ಮೂಲಕ ಕಳಕಳಿಯಿಂದ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸುಪ್ರಿಂ ಕೋರ್ಟಿನಲ್ಲಿ ತೀರ್ಪು ಆಗಿಲ್ಲ. ಹಿಂದೆ ಮಾನ್ಯ ಕೃಷ್ಣನ್ ಅವರೂ ಕೂಡ ಇದರ ಬಗ್ಗೆ ಕೇಳಿದ್ದರು.

ಶ್ರೀ ಎಂ. ಎಸ್. ಕೃಷ್ಣನ್.—ನನಗೂ ಇದೇ ಉತ್ತರವನ್ನು ಕೊಟ್ಟಿದ್ದೀರಿ. ಈಗ ಪಂಪಾಪತಿಯವರಿಗೂ ಇದೇ ಉತ್ತರವನ್ನು ಕೊಡುತ್ತಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಸುಪ್ರಿಂ ಕೋರ್ಟು ಏನು ಹೇಳುತ್ತದೆ ಅದರಂತೆ ಕೇಳುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಪಂಪಾಪತಿ.—ಕನಿಷ್ಟ ಕೂಲಿಗೆ ಸುಪ್ರಿಂ ಕೋರ್ಟ್‌ಗೆ ಹೋಗಿದ್ದೀರಲ್ಲ ?

ಶ್ರೀ ಎಂ. ಎಸ್. ಕೃಷ್ಣನ್.—ಸುಪ್ರಿಂ ಕೋರ್ಟಿಗೆ ಹೋಗಿದ್ದೇ ತಪ್ಪು. ಈ ವಿಷಯದಲ್ಲಿ ಸುಪ್ರಿಂ ಕೋರ್ಟುವರೆಗೆ ಹೋಗಿದ್ದು ನ್ಯಾಯವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಡೈಲಿ ವೇಜಸ್ ನೌಕರರ ಬಗ್ಗೆ ಈ ತಿಂಗಳು 31ನೇ ತಾರೀಕಿಗೆ ಸ್ಪೆಷಲ್ ರೂಲ್ಸ್ ಫ್ರೇಮ್ ಮಾಡಿ ಸರ್ಕಾರದ ಆಜ್ಞೆ ಹೊರಬರುತ್ತದೆ. 1-4-84ರಿಂದ ಇದು ಅಸ್ತಿತ್ವಕ್ಕೆ ಬರುತ್ತದೆ. ಸರ್ಕಾರ ನಿರ್ಣಯ ತೆಗೆದುಕೊಂಡಿದ್ದನ್ನು ಬದಲಾಯಿಸುವಪ್ರಶ್ನೆ ಇಲ್ಲ.

**Q. No. (685) 1356**

Mr. Speaker.—The question has been carried over as some information is not received.

[Q. No. 1531—Member absent.

**Carried Over Questions-29th List**

Q. N. 417 (1151) (Member Absent)

**Q. No. 414 (1271)**

ಶ್ರೀ ಆರ್. ಎನ್. ಲಕ್ಷೀಪತಿ.—ಸ್ವಾಮಿ, ಮಾಹಿತಿ ಇನ್ನೂ ಬಂದಿಲ್ಲ. ಸ್ವಲ್ಪ ಕಾಲಾವಕಾಶ ಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಕಳೆದ ಸಲ ಎಷ್ಟೋ ಪ್ರಶ್ನೆಗಳು ಹೀಗೆ ಉತ್ತರ ಸಿಗದೆ ಹೋದವು. ಬೇಕಾದರೆ ನಾಳೆ ಉತ್ತರ ಹೇಳಲಿ. ಬಹಳ ದಿವಸಗಳ ಹಿಂದೆಯೇ ಕೇಳಿರುವಂಥ ಪ್ರಶ್ನೆ ಇದು.

ಅಧ್ಯಕ್ಷರು.—ಮಾಹಿತಿ ಬರಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಆಫ್ ಪ್ರೊಸಿಜರ್‌ನಲ್ಲಿ ಇಂಥ ಮಂತ್ರಿಗಳು ಇಂತಹ ತಾರೀಕಿಗೆ ಉತ್ತರ ಕೊಡಬೇಕೆಂದು ಇದೆ. ಇಷ್ಟು ದಿವಸಗಳ ಮುಂಚೆ ಪ್ರಶ್ನೆ ಕೇಳಬೇಕೆಂದು ಇದೆ. ಇದರ ಅರ್ಥ ಏನೆಂದರೆ ಆ ತಾರೀಕಿನಲ್ಲಿ ಮಂತ್ರಿಗಳು ಹೇಗಾದರೂ ಮಾಡಿ ಉತ್ತರ ಕೊಡುವ ವ್ಯವಸ್ಥೆ ಮಾಡಬೇಕೆಂದು ಇದನ್ನು ಮಾಡಿದ್ದೀರಿ. ಇವಾಗ ಮಂತ್ರಿಗಳು ಉತ್ತರವನ್ನು ನಾಳೆ ಕೊಡುತ್ತೇನೆ. ಇನ್ನೊಂದು ವಾರದಲ್ಲಿ ಕೊಡುತ್ತೇನೆ ಎಂದು ಹೇಳಿದರೆ ನಮಗೆ ಮಾತ್ರ ಒಂದು ನಿಯಮ, ಅವರಿಗೆ ಮಾತ್ರ ಬೇರೆ ನಿಯಮ ಎಂದು ಹೇಳಿದಂತಾಗಲಿಲ್ಲವೆ ?

Mr. Speaker.—There are umpteen number of instances to show that questions were heldover for more than two years. At least now we are fortunate enough to get majority of the replies within ten days. I am trying to regulate.

ಶ್ರೀ ಎಂ. ಎಸ್. ಕೃಷ್ಣನ್.—ಬೇರೆಯವರ ಕಾಲ ಬೇಡ. ನಿಮ್ಮ ಕಾಲದಲ್ಲಾದರೂ ಒಳ್ಳೆಯ ವ್ಯವಸ್ಥೆ ಆಗಲಿ.